ಈ) ಸಂಸ್ಥೆಯ ಚಾಲನಾ ಸಿಬ್ಬಂದಿಗಳು (ಚಾಲಕ/ಚಾಲಕ ಕಂ ನಿರ್ವಾಹಕರು/ ನಿರ್ವಾಹಕರು) ಸಮವಸ್ತ್ರದ ಮೇಲೆ ಕಡ್ಡಾಯವಾಗಿ ನಾಮಧೇಯ ಫಲಕಗಳನ್ನು (ಸಿಬ್ಬಂದಿಯ ಹೆಸರು, ಬಿಲ್ಲೆಸಂಖ್ಯೆ, ಘಟಕ ಸಂಖ್ಯೆ) ಪ್ರದರ್ಶಿಸಬೇಕೆಂದು ಆದೇಶ ಹೊರಡಿಸಲಾಗಿರುತ್ತದೆ.

ಪ್ರಯಾಣಿಕರು ತಮ್ಮ ಕುಂದುಕೊರತೆಗಳನ್ನು / ದೂರುಗಳನ್ನು ನೀಡಲು ಅನುಕೂಲವಾಗುವಂತೆ ಸಂಸ್ಥೆಯ ಕಾಲ್‌ಸೆಂಟರ್ ಟೋಲ್ ಫ್ರೀ ದೂರವಾಣಿ ಸಂಖ್ಯೆ 1800–425–1663ಯನ್ನು ಎಲ್ಲಾ ಬಸ್ಸುಗಳಲ್ಲಿ ಪ್ರದರ್ಶಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಈ ಮೂಲಕ ಪ್ರಯಾಣಿಕರ ಕುಂದು ಕೊರತೆಗಳನ್ನು ತ್ವರಿತಗತಿಯಲ್ಲಿ ನಿವಾರಿಸಲಾಗುತ್ತಿದೆ.

ಉ) ಕುಂದುಕೊರತೆಗಳ ಬಗ್ಗೆ ಸಾರಥಿ ವಾಹನಕ್ಕೆ ಅಥವಾ **"ಸಾರಥಿ ಶಾಖೆಗೆ"** ಬಂದಂತಹ ದೂರುಗಳನ್ನು ಕೂಡಲೇ ಪರಿಶೀಲಿಸಿ, ಕ್ರಮ ಕೈಗೊಂಡ ಬಗ್ಗೆ ಎಸ್‌ಎಂಎಸ್ /ಇ–ಮೇಲ್ ಮುಖಾಂತರ ಹಾಗೂ ಪತ್ರ ಮುಖೇನ ದೂರು ಸಲ್ಲಿಸುವವರಿಗೆ ಮಾಹಿತಿಯನ್ನು ನೀಡಲಾಗುತ್ತಿದೆ.

ಊ) ತ್ಯಾಗರಾಜನಗರದಿಂದ ಸಜ್ಜನರಾವ್‌ವೃತ್ತ ಹಾಗೂ ಜೆ.ಸಿ.ರಸ್ತೆಯ ಮೂಲಕ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಇದುವರೆವಿಗೂ ಯಾವುದೇ ಕೋರಿಕೆ ಬಂದಿರುವುದಿಲ್ಲ. ಪ್ರಸ್ತುತ ತ್ಯಾಗರಾಜನಗರದಿಂದ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಮಾರ್ಗಸಂಖ್ಯೆ 31–ಇ, 210–ಎನ್, 210ಪಿ, ಕ್ಯೂ, ಡಬ್ಲ್ಯೂ, ಡಬ್ಲ್ಯೂಎ, ಎನ್‌ಎ, ಎನ್‌ಬಿ, ಮತ್ತು 374–ಜಿ ಗಳಲ್ಲಿ 33 ಅನುಸೂಚಿಗಳು ಆಚರಣೆಯಲ್ಲಿದ್ದು, ಸದರಿ ಅನುಸೂಚಿಗಳಲ್ಲಿ ರಾಮಕೃಷ್ಣ ಆಶ್ರಮದ ನಿಲುಗಡೆಯಲ್ಲಿ ಒಂದು ಬದಲಾವಣೆ ಮಾಡಿ ಮಾರ್ಗಸಂಖ್ಯೆ 36 ಹಾಗೂ 43 ಗಳಲ್ಲಿ ಸಜ್ಜನ್‌ರಾವ್‌ವೃತ್ತ, ಜೆ.ಸಿ.ರಸ್ತೆಯ ಮೂಲಕ ಪ್ರಯಾಣಿಸಬಹುದಾಗಿರುತ್ತದೆ.

ಬಸವ ವಸತಿ ಯೋಜನೆಯಡಿ ಸ್ವಂತ ನಿವೇಶನ ಇಲ್ಲದವರಿಗೆ ಮನೆ

714 (198) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಸ್ವಂತ ನಿವೇಶನ ಇಲ್ಲದೇ ಇರುವ ಫಲಾನುಭವಿಗಳಿಗೆ ಬಸವ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಸಾಗುವಳಿ

ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಲು ಅನುಮತಿ ನೀಡುವ ಪ್ರಸ್ತಾವನೆಗೆ ಸರ್ಕಾರ ಅನುಮತಿ ನೀಡಿದೆಯೇ; (ವಿವರ ಒದಗಿಸುವುದು)

ಆ) ಮಂಗಳೂರು ವಿಧಾನಸಭಾ ವ್ಯಾಪ್ತಿಯಲ್ಲಿ ಇಲಾಖೆ ಕಳೆದ ಮೂರು ವರ್ಷದಿಂದ ನಿರ್ಮಿಸಿದ ಮನೆಗಳ ಸಂಖ್ಯೆ ಎಷ್ಟು? (ವಿವಿಧ ವಸತಿ ಯೋಜನೆಗಳಡಿ)

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು) :

ಅ) ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿ, ಸ್ವಂತ ನಿವೇಶನಗಳನ್ನು ಹೊಂದಿಲ್ಲದೇ ಇರುವ ಫಲಾನುಭವಿಗಳು ತಾವು ಹೊಂದಿರುವ ಸಾಗುವಳಿ ಜಮೀನಿನಲ್ಲಿ ಗರಿಷ್ಟ 2 ಗುಂಟೆಯಲ್ಲಿ ಮನೆಯನ್ನು ನಿರ್ಮಿಸಿಕೊಳ್ಳಲು ಸರ್ಕಾರವು ದಿನಾಂಕ: 30.01.2012 ರಲ್ಲಿ ಅನುಮೋದನೆ ನೀಡಿ ಆದೇಶ ಹೊರಡಿಸಿದೆ.

ಆ) ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ 2008–09ರಿಂದ 2012–13ನೇ ವರ್ಷಗಳವರೆಗೆ ನಿರ್ಮಿಸಿದ ಮನೆಗಳ ಯೋಜನಾವಾರು, ಶ್ರೇಣಿವಾರು ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಅನುಬಂಧ-1

2008-09 ರಿಂದ 2012-13ನೇ ಶ್ರೇಣಿಯವರೆಗೆ ವಿವಿಧ ವಸತಿ ಯೋಜನೆಗಳಡಿ ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಹಾಗೂ ಪೂರ್ಣಗೊಂಡ ಮನೆಗಳ ವಿವರ

ಯೋಜನೆ	ವರ್ಷ	ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗಬೇಕಿರುವ ಮನೆಗಳು	ಅನುಮೋದನೆಗೆ ಬಾಕಿ ಇರುವುದು
Rural Ashraya	2008-2009	384	322	32	30	0
Rural Ambedkar	2008-2009	6	6	0	0	0
Indira Awas Yojana	2008-2009	27	22	1	4	0
2008-2009 Total		**417**	**350**	**33**	**34**	**0**
Rural Ambedkar	2009-2010	2	0	2	0	0
Indira Awas Yojana - Flood	2009-2010	12	12	0	0	0
Indira Awas Yojana	2009-2010	198	171	19	8	0
2009-2010 Total		**212**	**183**	**21**	**8**	**0**
Basava Vasathi Yojana	2010-2011	4000	243	434	811	2512
2010-2011 Total		**4000**	**243**	**434**	**811**	**2512**
Indira Awas Yojana – Upgradation	2011-2012	13	4	0	9	0
Indira Awas Yojana – Flood	2011-2012	70	14	32	24	0
Indira Awas Yojana	2011-2012	98	10	44	44	0
2011-2012 Total		**181**	**28**	**76**	**77**	**0**
Indira Awas Yojana	2012-2013	116	0	0	0	116
2012-2013 Total		**116**	**0**	**0**	**0**	**116**
Grand Total		**4926**	**804**	**564**	**930**	**2628**